**<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು ವಾದಿ ಪರ : ಶ್ರೀ ಬಿ.ಪಿ., ವಕೀಲರಿಂದಃ</u>**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ . ನನಗೆ ಕನ್ನಡ ಮತ್ತು ಇಂಗ್ಲೀಷ್ ಭಾಷೆ ಓದು ಮತ್ತು ಬರೆಯಲು ಬರುವುದಿಲ್ಲ. ನಾನು ಎ.ಬಿ. ತಿಪ್ಪೇಸ್ವಾಮಿ ಅಂತ ಕನ್ನಡ ಮತ್ತು ಇಂಗ್ಲೀಷ್ ನಲ್ಲಿ ಸಹಿ ಮಾಡುತ್ತೇನೆ. ನನ್ನ ಸ್ವಂತ ಊರು ಜಾಗನೂರಹಟ್ಟಿ ಇರುತ್ತದೆ. ನನ್ನ ಅಜ್ಜಿಯ ಹೆಸರು ಪಾಪಮ್ಮ ಅಂತ ಇರುತ್ತದೆ. ಅದೇ ರೀತಿ ನನ್ನ ಅಜ್ಜನ ಹೆಸರು ಹುಣಸೇಮರದ ಮಲ್ಲಯ್ಯ ಅಂತ ಇರುತ್ತದೆ. ನನ್ನ ಅಜ್ಜಿಗೆ 3 ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗ ಇರುತ್ತಾರೆ. 1) ಓಬಮ್ಮ, 2) ಪಾಲಕ್ಕ, 3) ಇನ್ನೊಬ್ಬಳ ಹೆಸರು ಕೂಡ ಪಾಲಕ್ಕ ಅಂತ ಇರುತ್ತದೆ. ಅದೇ ರೀತಿ ಸದರಿ 3 ಜನ ಹೆಣ್ಣು ಮಕ್ಕಳ ಪೈಕಿ ಚಿಕ್ಕವಳಾದ ಪಾಲಕ್ಕ ಜೀವಂತ ಇದ್ದು ಇನ್ನಿಬ್ಬರು ಮೃತಪಟ್ಟಿರುತ್ತಾರೆ.

ನನ್ನ ಹೆಂಡತಿ ಹೆಸರು ತಿಪ್ಪಮ್ಮ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಹೆಂಡತಿ ಹೆಸರು ಶಾರದಮ್ಮ ಅಂತ ಇರುತ್ತದೆ. ನನ್ನ ಅತ್ತೆ ಓಬಮ್ಮನ ಮಗಳೇ ತಿಪ್ಪಮ್ಮ ಇರುತ್ತಾಳೆ ಎಂದರೆ ಸರಿಯಲ್ಲ. ಪಾಪಮ್ಮ ನನಗೆ ಮತ್ತು ನನ್ನ ಅಜ್ಜಿ ತಿಪ್ಪಮ್ಮ ಇವರಿಗೆ ಮೊಮ್ಮಗಳಾಗಬೇಕು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ತಿಪ್ಪಮ್ಮ ಯಾರು ಅಂತ ನನಗೆ ಗೊತ್ತಿಲ್ಲ.

ದಾವಾ ಆಸ್ತಿಯು ನಾಯಕನಹಟ್ಟಿ ಹೋಬಳಿ ಗೌಡಗೆರೆ ಗ್ರಾಮಕ್ಕೆ ಸೇರಿದ್ದು ಇರುತ್ತದೆ ಎಂದರೆ ಸರಿ. ಸದರಿ ದಾವಾ ಜಮೀನು ವಾದಿ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಜಮೀನಾಗಿರುತ್ತದೆ ಎಂದರೆ ಸರಿಯಲ್ಲ. ಗೌಡಗೆರೆ ಗ್ರಾಮದ ಸರ್ವೆ ನಂ. 73/8 ರಲ್ಲಿ 3 ಎಕರೆ ಜಮೀನು ಇರುತ್ತದೆ.

ವಾದಿಯರು ನನ್ನ ಮಕ್ಕಳು ಎಂದರೆ ಸರಿಯಲ್ಲ. ನನ್ನ ಮೊದಲನೇ ಮಗ ಮಲ್ಲಿಕಾರ್ಜುನ ಮರಣ ಹೊಂದಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಮಲ್ಲಿಕಾರ್ಜುನ ಯಾವಾಗ ತೀರಿಕೊಂಡಿರುತ್ತಾರೆ ಅಂತ ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ಸದರಿ ಮಲ್ಲಿಕಾರ್ಜುನ ನನಗೆ ಸಂಬಂಧ ಇಲ್ಲದೇ ಇರುವುದರಿಂದ ಆತನ ಬಗ್ಗೆ ನನಗೆ ಗೊತ್ತಿಲ್ಲ

ಅಂತ ಸಾಕ್ಷಿ ನುಡಿಯುತ್ತಾರೆ. ನನ್ನ ಮಗ ಮಲ್ಲಿಕಾರ್ಜುನ ದಿಃ 03.09.1987 ರಂದು ಮೃತಪಟ್ಟಿರುತ್ತಾನೆ ಅಂತ ನಾನು ಚಳ್ಳಕೆರೆಯ ಕಿರಿಯ ವಿಭಾಗ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಮೃತ ಪಟ್ಟ ಬಗ್ಗೆ ಸಿ.ಆರ್.ಮಿಸ್.ನಂ. 591/2016 ರಂತೆ ಅರ್ಜಿ ಸಲ್ಲಿಸಿ ಮರಣ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಮಗ ಮಲ್ಲಿಕಾರ್ಜುನ ಇವರು ದಾವಣಗೆರೆಯ ಕುಂದುವಾಡ ಗ್ರಾಮದಲ್ಲಿ ಮರಣ ಹೊಂದಿದ್ದು ನಾನು ಚಳ್ಳಕೆರೆ ಯಲ್ಲಿ ಮರಣ ಹೊಂದಿರುತ್ತಾರೆ ಅಂತ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಮರಣ ಪ್ರಮಾಣ ಪತ್ರ ಪಡೆದಿರುತ್ತೇನೆ ಎಂದರೆ ಸಾಕ್ಷಿಯು ಅವರು ಯಾರೋ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯ ಕೋರಿದ್ದರಿಂದ ರೂ. 100/- ಖರ್ಚಿನೊಂದಿಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಳ್ಳಕೆರೆ.